**ನೋಂದಣಿ ಅಂಚೆ ಮತ್ತು ಸ್ವೀಕೃತಿ ಬಾಕಿ**

**ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಕಛೇರಿಯ ನಡವಳಿಗಳು**

**ವಿಷಯ:** ಶ್ರೀ.ಜಯರಾಮು.ಡಿ, ಸಹಾಯಕರು, ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ, ಇವರ ಅನಧಿಕೃತ ಗೈರುಹಾಜರಿ ಕುರಿತು ದಂಡನೆ ವಿಧಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

**ಓದಲಾಗಿದೆ:**
1) ದೋಷಾರೋಪಣಾ ಪಟ್ಟಿ ದಿನಾಂಕ: 23/03/2015.
2) ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನೇಮಕಾತಿ ಆದೇಶ ಸಂ: ಡಿಟಿಇ 13 ಡಿಇಕ್ಯೂ(1) 2013, ದಿನಾಂಕ: 25/05/2015.
3) ಇಲಾಖಾ ವಿಚಾರಣೆಯ ಅಂತಿಮ ವರದಿ ದಿನಾಂಕ: 29/07/2015.

**********

**ಪ್ರಸ್ತಾವನೆ;**

ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ ಇಲ್ಲಿ ಯಾಂತ್ರಿಕ ವಿಭಾಗದಲ್ಲಿ ಸಹಾಯಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ **ಶ್ರೀ.ಡಿ.ಜಯರಾಮು, ಇವರು** ದಿನಾಂಕ:14/07/2008 ರಿಂದ 02/01/2009 ರವರೆಗೆ 173 ದಿನಗಳು, ದಿನಾಂಕ: 17/06/2009 ರಿಂದ 20/1/2010ರವರೆಗೆ 219 ದಿನಗಳು, ದಿನಾಂಕ: 02/04/2011 ರಿಂದ 14/07/2011ರವರೆಗೆ 103 ದಿನಗಳು, ದಿನಾಂಕ: 07/05/2013 ರಿಂದ 16/12/2013ರವರೆಗೆ 124 ದಿನಗಳು, ದಿನಾಂಕ: 03/02/2014 ರಿಂದ 20/04/2014ರವರೆಗೆ 77 ದಿನಗಳು ಮತ್ತು ದಿನಾಂಕ: 27/04/2014 ರಿಂದ 20/11/2014ರವರೆಗೆ 209 ದಿನಗಳು ಒಟ್ಟಾರೆ 1005 ದಿನಗಳು ಅನಧಿಕೃತ ಗೈರುಹಾಜರಾಗಿರುತ್ತಾರೆ. ಈ ಹಿಂದೆಯೂ ಸಹ ಇವರು ದೈನಂದಿನ ಕಛೇರಿ ಕೆಲಸಗಳಿಗೆ ಆಗಾಗ ಗೈರುಹಾಜರಾಗುವುದನ್ನು ರೂಢಿಸಿಕೊಂಡಿರುತ್ತಾರೆ. ಈ ಬಗ್ಗೆ ಸಂಸ್ಥೆಯ ಪ್ರಿನ್ಸಿಪಾಲರು ಹಲವಾರು ಜ್ಞಾಪನಗಳನ್ನು ನೀಡಿದ್ದರೂ ಸಹ ಇವರ ವರ್ತನೆಯಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ. ಮತ್ತು ಸಮಜಾಯಿಷಿ ಪತ್ರಗಳಲ್ಲಿ ದ್ವಂದ್ವ ಹೇಳಿಕೆಗಳನ್ನು ನೀಡಿರುತ್ತಾರೆ. ಇವರು ದೀರ್ಘಾವಧಿ ಅನಧಿಕೃತ ಗೈರುಹಾಜರಾದ ಹಿನ್ನೆಲೆಯಲ್ಲಿ ಇವರ ವಿರುದ್ಧದ ಆರೋಪಗಳ ಬಗ್ಗೆ ದಿನಾಂಕ: 23/03/2015 ರಂದು ನಿಯಮಾನುಸಾರ ದೋಷಾರೋಪಣ ಪಟ್ಟಿಯನ್ನು ನೋಂದಣಿ ಅಂಚೆ ಮತ್ತು ಸ್ವೀಕೃತಿ ಬಾಕಿ ಮುಖಾಂತರ ಜಾರಿ ಮಾಡಿ 15 ದಿವಸದೊಳಗಾಗಿ ಅವರ ಪ್ರತಿವಾದದ ಲಿಖಿತ ಹೇಳಿಕೆಯನ್ನು ಸಲ್ಲಿಸಲು ತಿಳಿಸಲಾಗಿತ್ತು. ಆದರೆ, ಇವರು ದೋಷಾರೋಪಣಾ ಪಟ್ಟಿಯನ್ನು ಸ್ವೀಕರಿಸಿಕೊಂಡು ಯಾವ ಸಮಜಾಯಿಷಿಯನ್ನು ನೀಡಿರುವುದಿಲ್ಲ. ಇವರು ಕರ್ತವ್ಯ ನಿರ್ಲಕ್ಷ್ಯತೆ ತೋರಿದ್ದರಿಂದ ಹಾಗೂ ಇವರ ಮೇಲಿನ ಆರೋಪಗಳ ಬಗ್ಗೆ ಶಿಸ್ತು ಪ್ರಾಧಿಕಾರವು ನಿಯಮಾನುಸಾರ ಪೂರ್ಣಾವಧಿ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ ಶ್ರೀ.ಎ.ಕೃಷ್ಣಪ್ಪ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ದಿನಾಂಕ: 25/05/2015ರಲ್ಲಿ ನೇಮಿಸಲಾಯಿತು. ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ದಿನಾಂಕ:29/07/2015 ರಲ್ಲಿ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಅವಲೋಕಿಸಿದಾಗ ವರದಿಯಲ್ಲಿ ಆಪಾದಿತರು 2 ವರ್ಷ 8 ತಿಂಗಳವರೆಗೂ ಅನಧಿಕೃತ ಗೈರುಹಾಜರಾಗಿದ್ದು, ಹಾಗೂ ಈ ದಿನದವರೆಗೂ ಅನಧಿಕೃತ ಗೈರುಹಾಜರಾಗಿರುವುದರಿಂದ ಇವರು ಒಬ್ಬ ಸರ್ಕಾರಿ ನೌಕರರಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಸರ್ಕಾರಿ ನೌಕರನ ನಡತೆ ನಿಯಮಗಳು 1966ರ ನಿಯಮ 3(1)ರ ಉಪನಿಯಮ(i),(ii) ಮತ್ತು (iii)ನ್ನು ಉಲ್ಲಂಘಿಸಿ, ಅವಿಧೇಯತೆಯಿಂದ ನಡೆದು ಕೊಂಡಿರುವುದು ಕಂಡುಬರುತ್ತದೆ. ಮೇಲೆ ಹೇಳಿದ ಎಲ್ಲಾ ಕಾರಣಗಳಿಂದಾಗಿ ಹಾಗೂ ಉಭಯ ಪಾರ್ಟಿಗಳ ಸಾಕ್ಷ್ಯಾಧಾರಗಳನ್ನು, ದಾಖಲಾತಿಗಳನ್ನು ಪರಿಶೀಲಿಸಿ ನನ್ನ ಅಭಿಪ್ರಾಯದಲ್ಲಿ ಆಪಾದಿತರ ವಿರುದ್ಧ ಹೊರಿಸಿರುವ ಆರೋಪಗಳು ರುಜುವಾತಾಗಿದೆ ಎಂದು ತೀರ್ಮಾನಿಸಿ ವಿಚಾರಣಾಧಿಕಾರಿಗಳು ಅಂತಿಮ ವರದಿಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ಸದರಿ ಅಂತಿಮ ವಿಚಾರಣಾ ವರದಿಯನ್ನು ಅಂಗೀಕರಿಸಿ ಏಕೆ ಸೂಕ್ತ ದಂಡನೆ ವಿಧಿಸಬಾರದು ಎಂಬುದರ ಬಗ್ಗೆ ಇಲಾಖಾ ವಿಚಾರಣಾ ವರದಿಯನ್ನು ಲಗತ್ತಿಸಿ ಎರಡನೇ ಕಾರಣ ಕೇಳುವ ನೋಟೀಸು ಮೂಲಕ ಜಾರಿ ಮಾಡಿ 30 ದಿವಸಗಳೊಳಗಾಗಿ ಅವರ ಲಿಖಿತ ಸಮಜಾಯಿಷಿಯನ್ನು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸುವಂತೆ ತಿಳಿಸಲಾಗಿತ್ತು. ಆದರೆ ಸದರಿ ಆರೋಪಿತರಿಂದ ಯಾವುದೇ ಸಮಜಾಯಿಷಿ ಪತ್ರವನ್ನು ಸಲ್ಲಿಸಿರುವುದಿಲ್ಲ.

ಆದ್ದರಿಂದ ಸದರಿಯವರ ಮೇಲಿನ ಆರೋಪವನ್ನು ಗಂಭೀರವಾಗಿ ಪರಿಗಣಿಸಿ ವಿಚಾರಣಾಧಿಕಾರಿಗಳ ಅಂತಿಮ ವರದಿಯನ್ನು ಅಂಗೀಕರಿಸಿ ಈ ಕೆಳಕಂಡಂತೆ ದಂಡನೆ ವಿಧಿಸಿ ಆದೇಶಿಸಿದೆ.

**ನಿರ್ದೇಶಕರ ಆದೇಶ ಸಂಖ್ಯೆ: ಡಿಟಿಇ 07 ಡಿಇಕ್ಯೂ(1) 2014** / 2624

**ದಿನಾಂಕ: 09ನೇ ನವೆಂಬರ್ 2015**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಕಾರಣಗಳಿಂದಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಾವಳಿ 1957ರ ನಿಯಮ 8(vi) ರಲ್ಲಿನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ ಇಲ್ಲಿ ಯಾಂತ್ರಿಕ ವಿಭಾಗದಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ.ಡಿ.ಜಯರಾಮು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ **ಸರ್ಕಾರಿ ಸೇವೆಯಿಂದ ಈ ಮೂಲಕ ಕಡ್ಡಾಯ ನಿವೃತ್ತಿಗೊಳಿಸಿದೆ.** ಸದರಿಯವರ ಗೈರು ಹಾಜರಾದ ಅವಧಿಯನ್ನು ಕೆಲಸ ಮಾಡದ ದಿನಗಳೆಂದು (Dies non) ಎಂದು ಪರಿಗಣಿಸಿ ಆದೇಶಿಸಲಾಗಿದೆ.

**ನಿರ್ದೇಶಕರು**
**ಹಾಗೂ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರ,**
**ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.**

ಇವರಿಗೆ,

1) ಶ್ರೀ.ಡಿ.ಜಯರಾಮು, ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ (ಪ್ರಿನ್ಸಿಪಾಲರ ಮುಖಾಂತರ).
2) ಪ್ರಿನ್ಸಿಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ. (ಸದರಿ ಆದೇಶವನ್ನು ನೋಂದಣಿ ಅಂಚೆ ಮತ್ತು ಸ್ವೀಕೃತಿ ಬಾಕಿ ಮುಖಾಂತರ ಅವರ ಸ್ವ ವಿಳಾಸಕ್ಕೆ ಜಾರಿ ಮಾಡಿ ವರದಿಯನ್ನು ಈ ಕಛೇರಿಗೆ ಕಳುಹಿಸುವ ಸಲುವಾಗಿ ಮತ್ತು ಸದರಿಯವರನ್ನು ಕಡ್ಡಾಯ ನಿವೃತ್ತಿಗೊಳಿಸಿರುವ ಪ್ರಯುಕ್ತ ಕೂಡಲೇ ಇವರನ್ನು ಕಾರ್ಯವಿಮುಕ್ತಿಗೊಳಿಸಲು ಸೂಕ್ತ ಕ್ರಮ ಕೈಗೊಂಡು ವರದಿ ಕಳುಹಿಸುವುದು)
3) ಸಂಕಲನಾಧಿಕಾರಿಗಳು, ಸರ್ಕಾರಿ ಕೇಂದ್ರ ಮುದ್ರಣಾಲಯ ಯೂನಿಟ್, (ಕರ್ನಾಟಕ ರಾಜ್ಯಪತ್ರ ವಿಭಾಗ) 8ನೇ ಮೈಲು, ಮೈಸೂರು ರಸ್ತೆ, ಆರ್.ವಿ.ಕಾಲೇಜ್ ಅಂಚೆ, ಬೆಂಗಳೂರು-560 059 ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರ 10 ಪ್ರತಿಗಳನ್ನು, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುವುದು.

**ಪ್ರತಿ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ**

1) ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು
2) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
3) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
4) ಉಪಖಜಾನಾಧಿಕಾರಿಗಳು, ಚನ್ನಪಟ್ಟಣ.
5) ಪತ್ರಿಕಾ ಕಾರ್ಯದರ್ಶಿಗಳು, ಮಾನ್ಯ ಮುಖ್ಯಮಂತ್ರಿಗಳ ಕಾರ್ಯಾಲಯ, ವಿಧಾನಸೌಧ, ಬೆಂಗಳೂರು
6) ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
7) ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
8) ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
9) ಪ್ರಿನ್ಸಿಪಾಲರ, ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ.
10) ನಿರ್ದೇಶನಾಲಯದ ಆಪ್ತ ಶಾಖೆಗೆ.
11) ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
12) ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು, ಸದರಿ ಆದೇಶವನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ.
13) ಇಎಸ್‌ಟಿ(3), ಇಎಸ್‌ಟಿ(7), ಇಎಸ್‌ಟಿ8(ಬಿ) ಮತ್ತು ಇಎಸ್‌ಟಿ(9), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.